O.S.No.:134/2016
P.W.:1

ಈ ದಿನ ದಿಃ26.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- 1ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಆರ್.ಸಿ ರವರಿಂದಃ-**

1. ನಾನು ಈ ದಾವೆಯನ್ನು ತಮ್ಮಯ್ಯ ಎನ್ನುವವರ ವಿರುದ್ದ ಹೂಡಿರುತ್ತೇನೆ. ಸೈಟನ್ನು ನಮಗೆ ಬಿಟ್ಟುಕೊಡಿ ಎಂದು ಈ ದಾವೆಯನ್ನು ಹೂಡಿರುತ್ತೇನೆ. ದಾವಾಸ್ವತ್ತಿನ ನಂ.580 ಆಗಿರುತ್ತದೆ. ನಾನು ಸೆಕೆಂಡ್ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾಸ್ವತ್ತು ಮೂಲತಃ ಬೋರಮ್ಮ ರವರಿಗೆ ಸೇರಿದ ಸ್ವತ್ತು ಎಂದರೆ ಸರಿ. ಬೋರಮ್ಮ ನನಗೆ ಅಜ್ಜಿ ಆಗಬೇಕು, ಅಂದರೆ ನನ್ನ ತಂದೆಯ ತಾಯಿ.

2. ದಾವಾಸ್ವತ್ತನ್ನು ನನ್ನ ಅಜ್ಜಿಯಾದ ಬೋರಮ್ಮ ಹಾಗೂ ನನ್ನ ತಂದೆಯಾದ ದಾಸಯ್ಯ ರವರು ಸೇರಿಕೊಂಡು ದಿನಾಂಕ.28.10.1987ರಂದು 1ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಆ ಬಗ್ಗೆ ನನಗೆ 2000ನೇ ಸಾಲಿನಲ್ಲಿ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾಸ್ವತ್ತು ನಿಮ್ಮ ಅಜ್ಜಿಯಾದ ಬೋರಮ್ಮ ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸಾಕ್ಷಿಯು ಸ್ವಯಾರ್ಜಿತ ಸ್ವತ್ತು ಅಲ್ಲ, ಅದು ನಮ್ಮ

ಅಜ್ಜಿಗೆ ಸರ್ಕಾರದಿಂದ ಮಂಜೂರಾದ ಸೈಟು ಎಂದು ನುಡಿಯುತ್ತಾರೆ.

3. ನನ್ನ ಅಜ್ಜಿಯಾದ ಬೋರಮ್ಮ ರವರಿಗೆ ಒಟ್ಟು ಐದು ಜನ ಮಕ್ಕಳಿದ್ದು, ಅವರುಗಳೆಂದರೆ ಮುತ್ತಯ್ಯ, ದಾಸಯ್ಯ, ಚಿಕ್ಕವೆಂಕಟಯ್ಯ, ಕೃಷ್ಣಪ್ಪ ಮತ್ತು ವೆಂಕಟಮ್ಮ ಎಂದು ಇರುತ್ತಾರೆ. ದಾಸಯ್ಯ ರವರು ನನ್ನ ತಂದೆ ಎಂದರೆ ಸರಿ. ಈ ದಾವೆಯಲ್ಲಿ ಬೋರಮ್ಮ ರವರನ್ನು ನೀವು ಪಕ್ಷಕಾರರನ್ನಾಗಿ ಮಾಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರು ಆ ಕಾಲಕ್ಕೆ ಜೀವಂತ ಇರಲಿಲ್ಲ, 2001ನೇ ಸಾಲಿನಲ್ಲಿಯೇ ಅವರು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ನಂತರ ಸಾಕ್ಷಿಯು ಪುನಃ ಮುಂದುವರೆದು 2005ರಲ್ಲಿ ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ಬೋರಮ್ಮನ ಉಳಿದ ಮಕ್ಕಳುಗಳನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ.

4. ನನ್ನ ತಂದೆ ದಾಸಯ್ಯನಿಗೆ ಒಟ್ಟು ನಾಲ್ಕು ಜನ ಮಕ್ಕಳಿದ್ದು, ಅವರುಗಳೆಂದರೆ ಸ್ವಾಮಿ, ವೆಂಕಟರಾಮು, ಗಿರಿಜಾಮ್ಮ ಮತ್ತು ಪುಷ್ಪಲತಾ ಎಂದು ಇರುತ್ತಾರೆ. ನನ್ನ ಸಹೋದರ ಮತ್ತು ಸಹೋದರಿಯರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಾನು ಎಲೆಕ್ಟ್ರೀಸಿಯನ್ ಕೆಲಸ ಮಾಡುತ್ತೇನೆ. ನಾನು ಸದರಿ ಕೆಲಸವನ್ನು ಈ ಮೊದಲು ಬೆಂಗಳೂರಿನಲ್ಲಿ ಮಾಡುತ್ತಿದ್ದೆ, ಇತ್ತಿಚೆಗೆ ನಮ್ಮ ಊರಿಗೆ ಬಂದಿರುತ್ತೇನೆ. ನಾನು 1993ರಲ್ಲಿ ಬೆಂಗಳೂರಿಗೆ ಹೋಗಿರುತ್ತೇನೆ.

2006ರಲ್ಲಿ ನಾನು ವಾಪಸ್ಸು ಊರಿಗೆ ಬಂದಿರುತ್ತೇನೆ. ಸಾಕ್ಷಿಯು ಮುಂದುವರೆದು 1993ರಲ್ಲಿ ನಾನು ಮೊದಲಿಗೆ ಮೈಸೂರಿಗೆ ಹೋಗಿದ್ದೆ, ಆಮೇಲೆ ಬೆಂಗಳೂರಿಗೆ ಬಂದೆ, 2006ರ ವರೆಗೂ ಬೆಂಗಳೂರಿನಲ್ಲಿಯೇ ಇದ್ದೆ ಎಂದು ನುಡಿಯುತ್ತಾರೆ.

5. ನನ್ನ ತಂದೆಯವರು 2021ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ಈ ದಾವೆಯನ್ನು ಹೂಡುವ ಕಾಲಕ್ಕೆ ನಿಮ್ಮ ತಂದೆಯವರನ್ನು ಪಕ್ಷಕಾರರನ್ನಾಗಿ ಏಕೆ ಮಾಡಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ತಂದೆಯವರು ನೀನೆ ಕೇಸನ್ನು ನಡೆಸಿಕೋ ಎಂದು ನನಗೆ ಹೇಳಿದ್ದರು ಎಂದು ನುಡಿಯುತ್ತಾರೆ. ದಾವಾಸ್ವತ್ತಿನಲ್ಲಿ 1ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಅವರು ಸ್ವಾಧೀನದಲ್ಲಿ ಇಲ್ಲ, ಅದು ಪಾಳು ಇದೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಖಾತೆಯು ಯಾರ ಹೆಸರಿನಲ್ಲಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದು ಈಗಲೂ ಬೋರಮ್ಮನ ಹೆಸರಿಗೆ ಇದೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಖಾತೆ ಬೋರಮ್ಮನ ಹೆಸರಿಗೆ ಇದೆ ಎಂದು ತೋರಿಸಲು ದಾಖಲೆ ಕೊಟ್ಟಿರುತ್ತೇನೆ. ಕಂದಾಯವನ್ನು ಎಷ್ಟು ಕಟ್ಟಿರುತ್ತೇನೆಂದು ನನಗೆ ಖಚಿತವಾಗಿ ಹೇಳಲು ಆಗುವುದಿಲ್ಲ.

6. ಕ್ರಯಪತ್ರದ ಆಧಾರದ ಮೇಲೆ ಒಂದನೇ ಪ್ರತಿವಾದಿಯ ಹೆಸರಿಗೆ ದಾವಾಸ್ವತ್ತಿಗೆ

ಸಂಬಂಧಿಸಿದಂತೆ ಖಾತೆ ಬದಲಾವಣೆಯಾಗಿತ್ತು ಎಂದರೆ ಸಾಕ್ಷಿಯು ಪಿಡಿಒ ರವರು ಮೊದಲಿಗೆ ಖಾತೆ ಬದಲಾವಣೆ ಮಾಡಿದ್ದರು, ಆದರೆ ನಾನು ಕೇಸು ಹಾಕುತ್ತೇನೆಂದು ಹೇಳಿದಾಗ ಅವರು ಪುನಃ ನಮ್ಮ ಅಜ್ಜಿಯ ಹೆಸರನ್ನು ಡಿಮ್ಯಾಂಡಿನಲ್ಲಿ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಹೂಡುವ ಕಾಲಕ್ಕೆ ಅಥವಾ ಹಿಂದೆ ದಾವಾಸ್ವತ್ತು ಬೋರಮ್ಮನ ಹೆಸರಿಗೆ ಇತ್ತು ಎಂದು ತೋರಿಸಲು ದಾಖಲೆಯನ್ನು ಕೊಟ್ಟಿರುತ್ತೇನೆ. ನಾನು ದಾವಾಸ್ವತ್ತಿಗೆ ಸಂಬಂಧಿಸಿದಂತೆ ತೆರಿಗೆಯನ್ನು 2000ನೇ ಸಾಲಿನಿಂದ ಕಟ್ಟಿರುತ್ತೇನೆ. 2000ನೇ ಸಾಲಿನಿಂದ ಈ ರೀತಿ ತೆರಿಗೆ ಕಟ್ಟಿದ್ದೇನೆಂದು ತೋರಿಸಲು ದಾಖಲೆ ಕೊಟ್ಟಿರುತ್ತೇನೆ.

7. ನಿಪಿ-3 2023ನೇ ಸಾಲಿಗೆ ಸಂಬಂಧಿಸಿದ್ದು ಎಂದರೆ ಸರಿ. ದಾವಾ ಹೂಡುವ ಕಾಲಕ್ಕೆ ನನ್ನ ಅಜ್ಜಿಯಾದ ಬೋರಮ್ಮನ ಹೆಸರಿಗೆ ಯಾವುದೇ ದಾಖಲೆಗಳು ಇಲ್ಲದೆ ಇದ್ದರು ದಾವೆ ಹೂಡಿದ ನಂತರ ನಿಪಿ-1 ರಿಂದ ನಿಪಿ-3ರಂತೆ ಇರುವ ದಾಖಲೆಗಳನ್ನು ಪಂಚಾಯಿತಿ ಅಧಿಕಾರಿಗಳೊಂದಿಗೆ ಶ್ಯಾಮಿಲಾಗಿ ಸೃಷ್ಟಿಸಿಕೊಂಡು ತಂದು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಕ್ರಯದ ದಿನದಿಂದ ಇಂದಿನ ವರೆಗೂ ದಾವಾಸ್ವತ್ತಿನಲ್ಲಿ 1ನೇ ಪ್ರತಿವಾದಿಯೇ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. 1987-1988ನೇ ಸಾಲಿನಿಂದಲ್ಲೆ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಖಾತೆಯು 1ನೇ ಪ್ರತಿವಾದಿಯ ಹೆಸರಿಗೆ ಬದಲಾಗಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು

ಮುಂದುವರೆದು ಅವುಗಳನ್ನು 1ನೇ ಪ್ರತಿವಾದಿ ಸೃಷ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯ ಹೆಸರಿಗೆ ಆದ ಖಾತೆಯ ವಿರುದ್ದ ನಾನು ಎಲ್ಲಿಯು ಅಪೀಲು ಸಲ್ಲಿಸಿಲ್ಲ.

8. ದಾವಾಸ್ವತ್ತಿಗೆ ಸಂಬಂಧಿಸಿದಂತೆ ಈಗಲೂ ಸಹ 1ನೇ ಪ್ರತಿವಾದಿಯೇ ತೆರಿಗೆ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತು ಈಗ 6-7ಲಕ್ಷ ರೂಪಾಯಿ ಬೆಲೆ ಬಾಳುತ್ತದೆ. ದಾವಾಸ್ವತ್ತು ಈ ದಾವೆ ಹೂಡುವ ಕಾಲಕ್ಕೆ 3ಲಕ್ಷ ರೂಪಾಯಿ ಬೆಲೆ ಬಾಳುತ್ತಿತ್ತು. ದಾವಾಸ್ವತ್ತು ಈ ದಾವೆಯನ್ನು ಹೂಡುವ ಕಾಲಕ್ಕೆ 5ಲಕ್ಷ ರೂಪಾಯಿಗಿಂತಲ್ಲೂ ಹೆಚ್ಚಿ ನ ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ. 1987ನೇ ಸಾಲಿನಲ್ಲಿಯೇ 1ನೇ ಪ್ರತಿವಾದಿ ದಾವಾಸ್ವತ್ತನ್ನು ಖರೀದಿಸಿ ಅಂದಿನಿಂದಲ್ಲೂ ಅದರಲ್ಲಿ ಸ್ವಾ ಧೀನದಲ್ಲಿರುವುದರಿಂದ ಸದರಿ ಕ್ರಯಪತ್ರವನ್ನು ಪ್ರಶ್ನಿಸಲು ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲದೆ ಇರುವ ಕಾರಣಕ್ಕೆ ದಾವೆಯಲ್ಲಿ ಕೋರಿದಂತೆ ಪರಿಹಾರವನ್ನು ಪಡೆಯಲು ನನಗೆ ಅರ್ಹತೆ ಇಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿ ಮತ್ತು ನನ್ನ ತಂದೆ ಹೆಣ್ಣು ಮಕ್ಕಳ ಮದುವೆಯ ಹಣಕಾಸಿನ ಅವಶ್ಯಕತೆಗಳಿಗೋಸ್ಕರ ಮತ್ತು ತಮ್ಮ ಕುಟುಂಬದ ಇತರ ಖರ್ಚು ವೆಚ್ಚಗಳಿಗೋಸ್ಕರ ದಾವಾಸ್ವತ್ತನ್ನು 1ನೇ ಪ್ರತಿವಾದಿಗೆ ಈಗಾಗಲೇ ಮಾರಾಟ ಮಾಡಿರುವುದರಿಂದ ದಾವಾಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ

ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು 1987ರಲ್ಲಿಯೇ 1ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿದ್ದರು ಮತ್ತು ಅದರಲ್ಲಿ 1ನೇ ಪ್ರತಿವಾದಿಯು ಸ್ವಾಧೀನಾನುಭವದಲ್ಲಿರುವ ವಿಚಾರ ನನಗೆ ಗೊತ್ತಿದ್ದರು ದಾವಾಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**